ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 7 | ಸಂಚಿಕೆ : 2 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಏಪ್ರಿಲ್–ಮೇ 2012

## ಇದು ಯಾವೂರು?... ಬೆಂಗ್ಳೂರು! ಕನಿಷ್ಠವೇತನ ... ಮುನ್ನೂರು!

ಆತ್ಮೀಯ ಸಂಗಾತಿಗಳೇ,

ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನ ಸೂಜಿದಾರ ಪತ್ರಿಕೆಯನ್ನು ತಮ್ಮ ಕೈಗೆ ಇಡುತ್ತಿದ್ದೇವೆ.

ಯಾವ ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸಲು ಕಾರಣರಾದರೋ ಅಂತಹ ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ ಕಾರ್ಮಿಕರಿಗೆ ಇಂದಿಗೂ ಅತಿ ಕಡಿಮೆ ವೇತನ, ಕೆಲಸದ ಸ್ಥಳದಲ್ಲಿ ಶೋಷಣೆ, ಕಾನೂನು ಬದ್ಧ ಕನಿಷ್ಠವೇತನ ವಂಚನೆ, ಹೀಗೇ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಈ ವರ್ಷ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಜಂಟಿಯಾಗಿ, ಕನಿಷ್ಠವೇತನವನ್ನು ಪರಿಷ್ಕರಿಸುವಂತೆ ಹಾಗೂ ಬದುಕುವ ವೇತನವನ್ನು ನೀಡಬೇಕೆಂದು ಸರ್ಕಾರ ಮತ್ತು ಆಡಳಿತವರ್ಗದವರನ್ನು, ಅಂತಾರಾಷ್ಟ್ರೀಯ ಬ್ರಾಂಡ್‌ಗಳನ್ನು ಒತ್ತಾಯಿಸಲು ಆಂದೋಲನವನ್ನು ಹಮ್ಮಿಕೊಂಡಿದೆ. ಈ ಆಂದೋಲನದ ಉದ್ಘಾಟನೆಯನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು (8.3.2012) ಬನಪ್ಪ ಪಾರ್ಕ್‌ನಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸರ್ಕಾರದ ಏಕೈಕ ಮಹಿಳಾ ಸಚಿವರಾದ ಕುಮಾರಿ ಶೋಭಾ ಕರಂದ್ಲಾಜೆಯವರಿಗೆ ಈ ಕುರಿತು ಜ್ಞಾಪನಾಪತ್ರವನ್ನು ನೀಡಲಾಯಿತು. ಸಚಿವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಾ, 'ಕನಿಷ್ಠವೇತನವನ್ನು ಪರಿಷ್ಕರಿಸಲು ನಾನು ಕಾರ್ಮಿಕರ ಸಚಿವರನ್ನು ಒತ್ತಾಯಿಸುತ್ತೇನೆ' ಎಂದು ತಿಳಿಸಿದರು.

ಇದರೊಂದಿಗೆ ನಗರದ ಹಲವಾರು ಮಹಿಳಾ ಕಾರ್ಮಿಕರ ಪರ ಸಂಘಟನೆಗಳು, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಶೋಷಣೆ ಮುಕ್ತ ವಾತಾವರಣ ಇರಬೇಕೆಂದು, ಮಹಿಳಾ ಕಾರ್ಮಿಕರ ಮಕ್ಕಳಿಗಾಗಿ ಸಮರ್ಪಕ ಕ್ರಷ್ ವ್ಯವಸ್ಥೆಗಾಗಿ ಹಾಗೂ ಗೌರವಯುತವಾಗಿ ಬದುಕುವಷ್ಟು ವೇತನ ಸಿಗಬೇಕೆಂದು "ಗಾರ್ಮೆಂಟ್ಸ್ ಮಹಿಳೆಯರಿಗಾಗಿ ನಾವು" ಎಂಬ ಆಂದೋಲನವನ್ನು ಹಮ್ಮಿಕೊಂಡು, ಅದರ ಉದ್ಘಾಟನೆಯನ್ನೂ ಸಹ ಅಂದಿನ ಕಾರ್ಯಕ್ರಮದಲ್ಲಿ ನೆರವೇರಿಸಲಾಯಿತು. ಆಂದೋಲನದ ಭಾಗವಾಗಿ, ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು, ಕಾರ್ಖಾನೆಗಳಿಗೆ ಪತ್ರ ಬರೆಯುವುದು, ಹಾಗೂ ಬ್ರಾಂಡ್‌ಗಳಿಗೆ ಒತ್ತಾಯಿಸುವುದು ಹೀಗೇ ಹಲವಾರು ಚಟುವಟಿಕೆಗಳನ್ನು ಈ ಸಂಘಟನೆಗಳು ಬರುವ ದಿನದಲ್ಲಿ ನಡೆಸಲಿದ್ದಾರೆ. ಈ ಮೂಲಕ ಗಾರ್ಮೆಂಟ್ಸ್ ಕಾರ್ಮಿಕರ ಬದುಕಿನಲ್ಲಿ ಒಂದು ಮಹತ್ತರ ಬದಲಾವಣೆ ತರಲು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ.

### ಗಾರ್ಮೆಂಟ್ಸ್ ಉತ್ಪಾದಿಸುವ ದೇಶದ ಹಲವು ರಾಜ್ಯಗಳಲ್ಲಿ ನಿಗದಿ ಮಾಡಿರುವ ಕನಿಷ್ಠವೇತನ

| ರಾಜ್ಯಗಳು | ಕನಿಷ್ಟ ವೇತನ (ಕುಶಲವಲ್ಲದ) | ಕನಿಷ್ಟ ವೇತನ (ಅತಿಕುಶಲ) |
|---|---|---|
| ದೆಹಲಿ | ರೂ 256.00 | ರೂ. 312.00 |
| ಮಹಾರಾಷ್ಟ್ರ | ರೂ. 229.38 | ರೂ. 237.11 |
| ಹರಿಯಾಣ | ರೂ 186.42 | ರೂ. 211.42 |
| ಉತ್ತರ ಪ್ರದೇಶ | ರೂ 165.50 | ರೂ. 209.46 |
| ಪಂಜಾಬ್ | ರೂ. 154.40 | ರೂ. 199.52 |
| ಕರ್ನಾಟಕ (ಬೆಂಗಳೂರು) | ರೂ. 157.01 | ರೂ. 164.31 |

**ಬೆಂಗಳೂರಿನ ಗಾರ್ಮೆಂಟ್ಸ್ ಕಂಪನಿಗಳು ತಯಾರಿಸುವ ಬ್ರಾಂಡ್‌ಗಳಿಗೇ, ಬೇರೆ ರಾಜ್ಯದಲ್ಲಿರುವ ಗಾರ್ಮೆಂಟ್ಸ್ ಕಂಪನಿಗಳೂ ಉಡುಪು ತಯಾರಿಸುತ್ತವೆ. ಆದರೆ ಬೇರೆ ರಾಜ್ಯಗಳು ನಿಗದಿ ಮಾಡಿರುವ ಕನಿಷ್ಠವೇತನಕ್ಕಿಂತ ಅತಿ ಕಡಿಮೆ ವೇತನ ಇರುವುದು ಬೆಂಗಳೂರಿನಲ್ಲಿಯೇ.**




Scanned with OKEN Scanner

# ಕನಿಷ್ಠ ವೇತನ ಹೆಚ್ಚಳಕ್ಕಾಗಿ ಸರ್ಕಾರಕ್ಕೆ ನೀಡಿರುವ ಜ್ಞಾಪನಾಪತ್ರದ ಮುಖ್ಯಾಂಶಗಳು



ಮಾನ್ಯ ಸಚಿವರಾದ ಶೋಭಾ ಕರಂದ್ಲಾಜೆಯವರು ಜ್ಞಾಪನಾ ಪತ್ರವನ್ನು ಸ್ವೀಕರಿಸಿ ಮಾತನಾಡುತ್ತಿರುವುದು.

ಗಾರ್ಮೆಂಟ್ಸ್ ಉದ್ಯಮಕ್ಕೆ ಅನಿಯಮಿತವಾಗಿ ಸರ್ಕಾರವು ನಿಗದಿ ಮಾಡುತ್ತಿರುವ ಕನಿಷ್ಠವೇತನವು ಅತ್ಯಂತ ಕಡಿಮೆ ಇದೆ, ಹಾಗೂ ಸಕಾಲಕ್ಕೆ ಅದು ಪರಿಷ್ಕರಣೆಯಾಗುತ್ತಿಲ್ಲ, ಅದನ್ನು ಹೆಚ್ಚು ಮಾಡಬೇಕೆಂದು GATWU ಹಾಗೂ ಮುನ್ನಡೆಗಳು 2007 ರಿಂದಲೂ ಆಂದೋಲನ ನಡೆಸುತ್ತಲೇ ಬಂದಿದೆ. ಗಾರ್ಮೆಂಟ್ಸ್ ಉದ್ಯಮಕ್ಕೆ 2006 ರಲ್ಲಿ ಕನಿಷ್ಠ ವೇತನ ಹೆಚ್ಚಿಸಿ ಕರಡು ಅಧಿನಿಯಮವನ್ನು ಪ್ರಕಟಿಸಿದ್ದು, 2009ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿತ್ತು. ನಿಗದಿಗೊಳಿಸಿದ ಕನಿಷ್ಠ ವೇತನವನ್ನು ಮಾಲೀಕರು ಜಾರಿಗೊಳಿಸದ ಬಗ್ಗೆ, GATWU ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು, ಇದಾದ ಒಂದು ವರ್ಷದ ನಂತರ ಸರ್ಕಾರ ತನ್ನ ಹಿಂದಿನ ಅಧಿಸೂಚನೆಯನ್ನು ಹಿಂತೆಗೆದುಕೊಂಡು, ಹೆಚ್ಚಿಸಿದ ಕನಿಷ್ಠವೇತನವನ್ನು ಕಡಿಮೆಗೊಳಿಸಿ, ಹೊಸ ಅಧಿಸೂಚನೆಯನ್ನು ಹೊರಡಿಸಿತ್ತು. ಸರ್ಕಾರದ ಈ ಕ್ರಮವನ್ನೂ ಸಹ GATWU ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದೆ.

2012ರ ಮಾರ್ಚ್ ತಿಂಗಳಿಗೆ ಹಿಂದಿನ ಕನಿಷ್ಠ ವೇತನ ಪರಿಷ್ಕರಣೆಯಾಗಿ 3 ವರ್ಷಗಳು ಪೂರೈಸಿದೆ. ಆದ್ದರಿಂದ ತಕ್ಷಣವೇ ವೇತನ ಪರಿಷ್ಕರಣೆ ಮಾಡಬೇಕೆಂದು ಸರ್ಕಾರದ ಪ್ರತಿನಿಧಿಗಳು ಹಾಗೂ ಕಾರ್ಮಿಕ ಇಲಾಖೆಗೆ ನೀಡಿರುವ ಜ್ಞಾಪನಾ ಪತ್ರದ ಮುಖ್ಯಾಂಶಗಳು:

1. ಬೆಂಗಳೂರು ನಗರ, ದೇಶದಲ್ಲಿಯೇ ಇಂದು ಅತಿದೊಡ್ಡ ಹಾಗೂ ಉತ್ತಮ ಗುಣಮಟ್ಟದ ಸಿದ್ಧ ಉಡುಪು ಉತ್ಪಾದನೆಯ ನಗರವೆಂದು ಗುರುತಿಸಿಕೊಂಡಿದೆ. ಇಲ್ಲಿ ಸಿದ್ಧವಾಗುವ ಉಡುಪುಗಳು, ಜಗತ್ತಿನಾದ್ಯಂತ ಇರುವ ಪ್ರಸಿದ್ಧ ಮಾರುಕಟ್ಟೆಗಳಿಗೆ ತಯಾರಾಗುತ್ತಿವೆ. ಕೆಲವು ಬೃಹತ್ ಕಂಪನಿಗಳು ವರ್ಷಕ್ಕೆ 350 ರಿಂದ 1000 ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತಿದ್ದು, 10 ರಿಂದ 30 ಸಾವಿರಕ್ಕೂ ಮೀರಿ ಕಾರ್ಮಿಕರಿಗೆ ಈ ಕಂಪನಿಗಳಲ್ಲಿ ದುಡಿಯುತ್ತಿದ್ದಾರೆ. ಇದರೊಂದಿಗೇ ದೇಶೀಯ ಮಾರುಕಟ್ಟೆಗೂ ಸಹ ಬೃಹತ್ ಪ್ರಮಾಣದಲ್ಲಿ ಸಿದ್ಧ ಉಡುಪು ತಯಾರಾಗುತ್ತಿದೆ. ಲವೆಬಲ್, ಜಾಕಿ, ಅರವಿಂದ್ ಮತ್ತು ಕೆಲವು ಹೆಸರಿಲ್ಲದ ಬ್ರಾಂಡ್‌ಗಳು ದೇಶೀಯ ಮಾರುಕಟ್ಟೆಗೆ ನೂರಾರು ಕೋಟಿಯ ವಹಿವಾಟು ನಡೆಸುತ್ತಾ ಗಣನೀಯ ಲಾಭಾಂಶವನ್ನು ಗಳಿಸುತ್ತಿವೆ.

ಸುಮಾರು 6 ಲಕ್ಷ ಕಾರ್ಮಿಕರು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ, ಮೈಸೂರು ತುಮಕೂರು ಬಳ್ಳಾರಿ, ರಾಮನಗರ ಜಿಲ್ಲೆಗಳಿಂದ ಈ ಉದ್ಯಮದಲ್ಲಿ ದುಡಿಯುತ್ತಿದ್ದಾರೆ.

ಈ ಉದ್ಯಮದಲ್ಲಿ ದುಡಿಯುತ್ತಿರುವವರು ಹೆಚ್ಚಿನವರು ಮಹಿಳೆಯರಾಗಿದ್ದು, ಗ್ರಾಮೀಣ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ. ಹೆಚ್ಚಿನವರು ದಲಿತರು ಹಾಗೂ ಅಲ್ಪಸಂಖ್ಯಾತರು. ಏಕಾಂಗಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತವರಾಗಿದ್ದಾರೆ. ಈ ಕಾರ್ಮಿಕರೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠವೇತನ ಮಾತ್ರ ದೊರೆಯುತ್ತಿದ್ದು, ಎಷ್ಟೋ ಕಾರ್ಖಾನೆಗಳು ಅದಕ್ಕಿಂತ ಕಡಿಮೆ ವೇತನವನ್ನು ನೀಡುತ್ತಿವೆ. ಜೊತೆಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡದೆ 8 ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿವೆ.

2. ಸರ್ಕಾರ ಕಾರ್ಮಿಕರಿಗೆ ಇಂದು ನಿಗದಿ ಮಾಡುತ್ತಿರುವ ಕನಿಷ್ಠ ವೇತನದ ದರವನ್ನು ಲೆಕ್ಕ ಹಾಕಿದರೆ, ಕಳೆದ 26 ವರ್ಷಗಳಲ್ಲಿ ಕಾರ್ಮಿಕರಿಗೆ 10% ಗಳಷ್ಟು ವೇತನ ಇಳಿಕೆ ಕಂಡುಬರುತ್ತಿದೆ. ಇದು ಕಾರ್ಮಿಕರಿಗಾಗುತ್ತಿರುವ ಬಹು ದೊಡ್ಡ ಅನ್ಯಾಯವಾಗಿದೆ.

3. ಒಬ್ಬನ ದುಡಿಮೆಯಿರುವ ಒಂದು ಕುಟುಂಬವನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ವೇತನದ ನಿಗದಿ ಮಾಡಬೇಕೆಂದು ರೆಪ್ಟಕೋಸ್ ಬ್ರೆಟ್ ಅಂಡ್ ಕಂ. ತ/ ಕಾರ್ಮಿಕರು – 1992 (1 SCC 290) ಮೊಕದ್ದಮೆಯ ತೀರ್ಪಿನ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯವು ಸ್ಪಷ್ಟವಾಗಿ ಹೇಳುತ್ತದೆ.

*ತಕ್ಷಣವೇ ಕಾರ್ಯಪ್ರವೃತ್ತರಾದ ಜಂಟಿ ಕಾರ್ಮಿಕ ಆಯುಕ್ತರು(ಕನಿಷ್ಠವೇತನ)*

*GATWU ಹಾಗೂ ಗಾ.ಮು.ಕಾ. ಮುನ್ನಡೆಯ ಕಾರ್ಯಕರ್ತರು ಕನಿಷ್ಠವೇತನ ಪರಿಷ್ಕರಣೆಗಾಗಿ ಜಂಟಿ ಕಾರ್ಮಿಕ ಆಯುಕ್ತರಾದ ಶ್ರೀ ಜೆಂಕಲ್ಲಪ್ಪ ಅವರನ್ನು ಭೇಟಿ ಮಾಡಿ, ಜ್ಞಾಪನಾ ಪತ್ರವನ್ನು ಸಲ್ಲಿಸಿ, ತಮ್ಮ ಅಗತ್ಯಗಳನ್ನು ಅವರಿಗೆ ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಸ್ಪಂದಿಸಿದ ಆಯುಕ್ತರು, ತಕ್ಷಣವೇ ಮನವಿಯನ್ನು ಸ್ವೀಕರಿಸಿ ಪರಿಶೀಲಿಸಿ, ಮೂರು ವರ್ಷಗಳ ಅವಧಿಯು ಮುಗಿದಿರುವುದರಿಂದ, ಗಾರ್ಮೆಂಟ್ಸ್ ಉದ್ಯಮಕ್ಕೆ ವೇತನ ಪರಿಷ್ಕರಣೆಯ ಪ್ರಕ್ರಿಯೆಗೆ ಚಾಲನೆ ನೀಡಿದರು.*

*ಜೊತೆಗೆ ದಿನಂಕ 26.3.2012 ರಂದು ರಾಜ್ಯ ವಿಧಾನ ಸಭೆಯ ಬಜೆಟ್ ಅಧಿವೇಶನದಲ್ಲಿಯೂ ಸಹ ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠವೇತನದ ವಿಷಯವು ಚರ್ಚೆಗೆ ಬಂದಿತ್ತು. ಮಾನ್ಯ ಕಾರ್ಮಿಕ ಸಚಿವರು, ಮೂರು ವರ್ಷ ಪೂರೈಸಿದ ಎಲ್ಲ ಕೈಗಾರಿಕೆಗಳ ವೇತನವನ್ನೂ ಪರಿಷ್ಕರಣೆಯ ಪ್ರಕ್ರಿಯೆಗೆ ಒಳಪಡಿಸುವುದಾಗಿ ಹೇಳಿಕೆ ನೀಡಿದ್ದಾರೆ.*



Scanned with OKEN Scanner

4. GATWU, 2012 ರ ಫೆಬ್ರವರಿ ತಿಂಗಳಿನಲ್ಲಿ ಬೆಂಗಳೂರಿನ 15 ಗಾರ್ಮೆಂಟ್ಸ್ ಕಾರ್ಖಾನೆಗಳ 120 ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿ ಸಂಗ್ರಹಿಸಲಾದ ಕುಟುಂಬದ ತಿಂಗಳ ಖರ್ಚಿನ ವಿವರ ಹೀಗಿದೆ.

ಈ ಮೇಲಿನ ಪಟ್ಟಿಯಂತೆ, ಒಂದು ಕುಟುಂಬಕ್ಕೆ ಕನಿಷ್ಠ ಮಟ್ಟದ ಜೀವನವನ್ನು ನಡೆಸಲು ತಿಂಗಳಿಗೆ ರೂ. 9362.34 ಖರ್ಚಾಗುತ್ತಿದೆ.

| ವಿವರ | ತಿಂಗಳ ಖರ್ಚು |
|---|---|
| ಆಹಾರ | 3855.42 |
| ವಸತಿ | 2081.67 |
| ಇತರ ಉಪಯುಕ್ತತೆಗಳು | 400.97 |
| ಸಾರಿಗೆ | 767.42 |
| ವಿದ್ಯಾಭ್ಯಾಸ | 436.25 |
| ಆರೋಗ್ಯ | 476.41 |
| ಇತರೆ | 1344.19 |
| ಒಟ್ಟು | **9362.34** |

**5. ಉದ್ಯಮದ ಸಾಮರ್ಥ್ಯ:** ಕಾರ್ಮಿಕರು ಹೆಚ್ಚು ವೇತನವನ್ನು ಕೇಳಿದಾಗಲೆಲ್ಲಾ ಮಾಲೀಕರು ತಮಗೆ ಅಷ್ಟು ಕೊಡಲು ಆಗುವುದಿಲ್ಲ ಎಂದು ಸಿದ್ಧ ಉತ್ತರ ನೀಡಿ, ಕಾರ್ಮಿಕರ ಬೇಡಿಕೆಯನ್ನು ನಿರಾಕರಿಸುತ್ತಾರೆ. ಮೊದಲನೇ ಪುಟದಲ್ಲಿ ನೀಡಿರುವ ಪಟ್ಟಿಯ ಪ್ರಕಾರ ದೇಶದ ಪ್ರಮುಖ ರಾಜ್ಯಗಳಲ್ಲಿ ನಿಗದಿ ಪಡಿಸಿರುವ ಕನಿಷ್ಠ ವೇತನವು ಕರ್ನಾಟಕದ ಬೆಂಗಳೂರಿಗಿಂತ ಶೇ. 40 ರಿಂದ 50 ರಷ್ಟು ಹೆಚ್ಚಿದೆ. ಪ್ರಮುಖ ಕಂಪನಿಗಳು ಹೆಸರಾಂತ ಬ್ರಾಂಡ್‌ಗಳಿಗೆ ಉಡುಪು ತಯಾರಿಸಿ, ವರ್ಷಕ್ಕೆ ನೂರಾರು ಕೋಟಿ ವಹಿವಾಟು ನಡೆಸುತ್ತಿದ್ದಾರೆ. ತಮ್ಮ ಕಾರ್ಮಿಕರ ವೇತನ ಹೆಚ್ಚಿಸಲು ಹಾಗೂ ವಿದೇಶೀ ಬ್ರಾಂಡ್‌ಗಳೊಂದಿಗೆ ಹೆಚ್ಚಿನ ಬೆಲೆಯನ್ನು ಆಗ್ರಹಿಸಲು ಬೆಂಗಳೂರಿನಲ್ಲಿ ಇಂದು ಸಾಕಷ್ಟು ಅನುಕೂಲಕರ ವಾತಾವರಣವಿದೆ.

6. ಬೇಡಿಕೆಗಳು: ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುವ ಕುಶಲವಲ್ಲದ ವರ್ಗಕ್ಕೆ ದಿನವೊಂದಕ್ಕೆ **ರೂ. 300/–ಗಳು** ಶಾಸನ ಬದ್ಧ ಕನಿಷ್ಠ ವೇತನವಾಗಿ ದೊರೆಯಬೇಕು.

ಈ ಕೂಡಲೇ ತಾವು ತಕ್ಷಣವೇ ಕನಿಷ್ಠ ವೇತನ ಪರಿಷ್ಕರಣಾ ಸಮಿತಿಯನ್ನು ರಚಿಸಬೇಕು. ಹಾಗೂ ತಕ್ಷಣವೇ ವೇತನವನ್ನು ಪರಿಷ್ಕರಿಸಬೇಕು. ▢

## GATWU ಹಾಗೂ ಗಾ.ಮ.ಕಾ.ಮುನ್ನಡೆ

## ಸಂಘಟನೆಗಳ ಸಹಾಯಾರ್ಥ ನಿಧಿ ಸಂಗ್ರಹಣೆಗಾಗಿ 'ಮೈಸೂರು ಮಲ್ಲಿಗೆ' ನಾಟಕ ಪ್ರದರ್ಶನ



ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಈ ಎರಡೂ ಸಂಘಟನೆಗಳು ಕಳೆದ ಎಂಟು ವರ್ಷಗಳಿಂದ ಕಾರ್ಮಿಕರ ಪರ ಕೆಲಸ ಮಾಡಿಕೊಂಡು ಬರುತ್ತಿದೆ. ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಹಾಗೂ ತಮ್ಮ ಮೇಲಾಗುವ ಶೋಷಣೆಯ ವಿರುದ್ಧ ದನಿಯೆತ್ತಲು ಕಾರ್ಮಿಕರಿಗೆ ಅಪಾರ ಆತ್ಮವಿಶ್ವಾಸವನ್ನು ನೀಡಿದೆ. ಈ ಸಂಘಟನೆಗಳು ತಮ್ಮ ಎಲ್ಲಾ ಕಾರ್ಯಚಟುವಟಿಕೆಯನ್ನು ಮುಂದುವರೆಸಿ ಸ್ವಾಯತ್ತವಾಗಿ ಬೆಳೆಯುವ ಸಲುವಾಗಿ ಆರ್ಥಿಕವಾಗಿ ಸಬಲವಾಗಬೇಕಾಗಿದೆ.

ಈ ನಿಟ್ಟಿನಲ್ಲಿ ಮೈಸೂರಿನ ಕಲಾಗಂಗೋತ್ರಿ ತಂಡವು ದಿನಾಂಕ **12–5–2012** ರಂದು ನಗರದ **ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆ 6 ಗಂಟೆಗೆ ಸುಪ್ರಸಿದ್ಧ 'ಮೈಸೂರುಮಲ್ಲಿಗೆ'** ನಾಟಕವನ್ನು ಪ್ರಸ್ತುತಪಡಿಸಲು ಒಪ್ಪಿಕೊಂಡಿರುತ್ತಾರೆ. ಡಾ॥ ಬಿ.ವಿ. ರಾಜಾರಾಂ ಅವರು ನಿರ್ದೇಶಿಸಿರುವ ಈ ನಾಟಕವನ್ನು ಕಾರ್ಮಿಕರೆಲ್ಲರೂ ನೋಡಿ ಸಂಘಟನೆಗಳನ್ನು ಬೆಂಬಲಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

## "ಗಾರ್ಮೆಂಟ್ಸ್ ಮಹಿಳೆಯರಿಗಾಗಿ ನಾವು" (ಗಮನಾ) ಆಂದೋಲನ



ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಿ, ಆಂದೋಲನವನ್ನು ಉದ್ಘಾಟಿಸಿದ ಡಾ. ವಿಜಯಾ

**ಗಮನಾ (ಗಾರ್ಮೆಂಟ್ಸ್ ಮಹಿಳೆಯರಿಗಾಗಿ ನಾವು) – ಆಂದೋಲನದ ಸಹಭಾಗಿ ಸಂಘಟನೆಗಳು/ ವ್ಯಕ್ತಿಗಳು**

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, GATWU (ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್), ವಿಮೋಚನಾ, ಮಾನಸಬಳಗ, ಹೆಂಗಸರ ಹಕ್ಕಿನ ಸಂಘ, ಸಮಾನತಾ ಮಹಿಳಾ ವೇದಿಕೆ, ಪರ್ಯಾಯ ಕಾನೂನು ವೇದಿಕೆ, ಹಿಂದ್ ಮಜ್ದೂರ್ ಕಿಸಾನ್ ಪಂಚಾಯತ್, ಡಾ. ವಿಜಯಾ ಖ್ಯಾತ ಪತ್ರಕರ್ತರು, ದು.ಸರಸ್ವತಿ ಖ್ಯಾತ ಲೇಖಕಿ, ಸಿ.ಎಚ್. ಹನುಮಂತರಾಯ, ಖ್ಯಾತ ವಕೀಲರು, ಹೇಮಲತಾ ಮಹಿಷಿ, ಖ್ಯಾತ ವಕೀಲರು, ಡಾ॥ ಸಿ.ಎಸ್ ದ್ವಾರಕಾನಾಥ್, ಮಾಜಿ ಅಧ್ಯಕ್ಷರು, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ, ಬಂಜಗೆರೆ ಜಯಪ್ರಕಾಶ ಸಾಹಿತಿಗಳು, ಬಿ. ಸುರೇಶ ಖ್ಯಾತ ಚಲನಚಿತ್ರ ನಿರ್ದೇಶಕರು, ಮಂಜುನಾಥ ಅದ್ದೆ, ಖ್ಯಾತ ಪತ್ರಕರ್ತರು, ವಸುಂಧರಾ ಭೂಪತಿ, ಅಧ್ಯಕ್ಷರು, ಕರ್ನಾಟಕ ಲೇಖಕಿಯರ ಸಂಘ, ಎಲ್ ಹನುಮಂತಯ್ಯ, ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಕವಿಗಳು. ಇಂದೂಧರ ಹೊನ್ನಾಪುರ, ಸಂಪಾದಕರು, ಸಂವಾದ ಪತ್ರಿಕೆ, ಇನ್ನೂ ಹಲವು ಸಂಘಟನೆಗಳು/ವ್ಯಕ್ತಿಗಳು.

**ಆಂದೋಲನದ ಸಂಪರ್ಕ ಹಾಗೂ ಸಮನ್ವಯತೆಯ ಜವಾಬ್ದಾರಿಯನ್ನು ಪರ್ಯಾಯ ಕಾನೂನು ವೇದಿಕೆ(ALF)ಯ ಗೆಳೆಯರು ವಹಿಸಿಕೊಂಡಿದ್ದಾರೆ.** ▢



Scanned with OKEN Scanner

# ನಾವು ಅವಮಾನ ಸಹಿಸುವ ಹೇಡಿಗಳಲ್ಲ...
# ಸ್ವಾಭಿಮಾನದ ಸಹಜೀವಿಗಳು...



ಅಮೆರಿಕಾದ ಚಿಕಾಗೋ ನಗರದಲ್ಲಿ 1858 ರಲ್ಲಿ ಯಾವ ಟೆಕ್ಸ್‌ಟೈಲ್ ಉದ್ಯಮದ ಕಾರ್ಮಿಕರು ತಮ್ಮ ಮೇಲಾಗುತ್ತಿದ್ದ ದಬ್ಬಾಳಿಕೆಯನ್ನು ಖಂಡಿಸಿ ಬೀದಿಗಿಳಿದು ಪ್ರತಿಭಟಿಸಿ, ತಮ್ಮ ಜೀವ ತೆತ್ತು ಮಹಿಳಾ ದಿನದ ಆಚರಣೆಗೆ ಕಾರಣರಾದರೋ, ಅಂತಹ ಟೆಕ್ಸ್‌ಟೈಲ್ (ಗಾರ್ಮೆಂಟ್ಸ್) ಕಾರ್ಮಿಕರು ಇಂದೂ ಸಹ ಅದೇ ರೀತಿಯ ದಬ್ಬಾಳಿಕೆ ಮತ್ತು ಶೋಷಣೆಯನ್ನು ಅನುಭವಿಸುತ್ತದ್ದಾರೆ. ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿದ ಪ್ರತಿಭಟಿಸಿದ ಅವರ ಹಾದಿಯನ್ನೇ ಅನುಸರಿಸಿ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಾದ ನಾವು ಇಂದು ಅನುಭವಿಸುತ್ತಿರುವ ದಬ್ಬಾಳಿಕೆ, ದೌರ್ಜನ್ಯಗಳಿಂದ ಹೊರಬರಲು ಮತ್ತೆ ಬೀದಿಗಿಳಿದು ಪ್ರತಿಭಟಿಸಬೇಕಾಗಿದೆ. ಈ ಮೂಲಕ ನಮ್ಮ ಸಹೋದರಿಯರ ಹೋರಾಟವನ್ನು ಮುಂದುವರೆಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ GATWU ಹಾಗೂ ಗಾ.ಮ.ಕಾ. ಮುನ್ನಡೆ ಸಂಘಟನೆಗಳ ಸಹಯೋಗದಲ್ಲಿ:

- ಕನಿಷ್ಠವೇತನ ಪರಿಷ್ಕರಣೆಗೆ ತಕ್ಷಣವೇ ಸಮಿತಿ ರಚನೆಯಾಗಬೇಕು
- ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠ ವೇತನ ದಿನಕ್ಕೆ 300/- ರೂ. ದೊರೆಯಬೇಕು
- ಕೆಲಸದ ಸ್ಥಳದಲ್ಲಿ ಮಹಿಳಾ ಕಾರ್ಮಿಕರ ಮೇಲಿನ ದೌರ್ಜನ್ಯ ನಿಲ್ಲಬೇಕು
- ಕಾರ್ಮಿಕ ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು

ಎಂದು ಆಗ್ರಹಿಸಿ, ದಿನಾಂಕ 8-3-2012 ಗುರುವಾರದಂದು ಮಧ್ಯಾಹ್ನ 2 ಗಂಟೆಯಿಂದ ಬೃಹತ್ ರ್‍ಯಾಲಿ ನಡೆಸಿದರು. ರ್‍ಯಾಲಿಯಲ್ಲಿ ಸುಮಾರು 700 ಕಾರ್ಮಿಕರು ಭಾಗವಹಿಸಿದ್ದರು. ಚಾಮರಾಜಪೇಟೆಯ ಮಕ್ಕಳ ಕೂಟದಿಂದ ರ್‍ಯಾಲಿ ಆರಂಭವಾಯಿತು. ಸಮಾನತಾ ಮಹಿಳಾ ವೇದಿಕೆಯ ಗೆಳೆಯರು ತಮಟೆ ಬಡಿಯುವ ಮೂಲಕ ರ್‍ಯಾಲಿಯನ್ನು ಉದ್ಘಾಟಿಸಿದರು. ನಂತರ ರ್‍ಯಾಲಿಯೂ ಘೋಷಣೆಗಳನ್ನು ಕೂಗುತ್ತಾ, ಜೆ.ಸಿ ರಸ್ತೆಯ ಮಾರ್ಗವಾಗಿ 45 ನಿಮಿಷದ ಒಳಗಾಗಿ ಬನಪ್ಪ ಪಾರ್ಕ್ ತಲುಪಿತು.

**ದಿನಾಂಕ: 8-3-2012ರಂದು ಮಹಿಳಾ ದಿನಾಚರಣೆಯ ಅಂಗವಾಗಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳಕ್ಕಾಗಿ ಹಾಗೂ ಶೋಷಣೆ ಮುಕ್ತ ಕೆಲಸದ ವಾತಾವರಣಕ್ಕಾಗಿ ಮಕ್ಕಳಕೂಟದಿಂದ ಬನಪ್ಪ ಪಾರ್ಕ್‌ನವರೆಗೆ ರ್‍ಯಾಲಿ ನಡೆಸಿದರು.**

ನಂತರ ಬನಪ್ಪ ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ಮಾನ್ಯ ಇಂಧನ ಸಚಿವರಾದ ಶೋಭಾ ಕರಂದ್ಲಾಜೆ, ಕಾರ್ಮಿಕ ಮುಖಂಡರಾದ ಮೈಕೆಲ್‌ಫರ್ನಾಂಡಿಸ್, ಅಶೀಮ್‌ರಾಯ್, ಮಾಜಿ ಸಚಿವರಾದ ಬಿ.ಟಿ ಲಲಿತಾನಾಯಕ್, ಮಹಿಳಾ ಹೋರಾಟಗಾರರೂ, ಹಿರಿಯ ಪತ್ರಕರ್ತರೂ ಆದ ಡಾ. ವಿಜಯಾ ಕಿರುತೆರೆ ಹಾಗೂ ಸಿನಿಮಾ ಕಲಾವಿದೆ ರೇಖಾರಾವ್ ಅವರು ಈ ಸಭೆಯಲ್ಲಿ ಭಾಗವಹಿಸಿ ಕಾರ್ಮಿಕರ ಪರವಾಗಿ ಮಾತನಾಡಿದರು.

ಮಾನ್ಯ ಇಂಧನ ಸಚಿವರಾದ ಶೋಭಾ ಕರಂದ್ಲಾಜೆಯವರಿಗೆ ಕಾರ್ಮಿಕರ ಕನಿಷ್ಠವೇತನದ ಹೆಚ್ಚಳ ಕುರಿತು ಜ್ಞಾಪನಾ ಪತ್ರ ನೀಡಲಾಯಿತು. ಈ ಬಗ್ಗೆ ಕಾರ್ಮಿಕ ಸಚಿವರನ್ನು ಭೇಟಿ ಮಾಡಬೇಕೆಂದೂ ಆ ಸಮಯದಲ್ಲಿ ನಾನೂ ನಿಮ್ಮೊಂದಿಗೆ ಬರುವೆನೆಂದು ಸಚಿವರು ಭರವಸೆ ನೀಡಿದರು.



ಹಿರಿಯ ಕಾರ್ಮಿಕ ಮುಖಂಡರಾದ ಶ್ರೀ ಮೈಕೆಲ್ ಫರ್ನಾಂಡಿಸ್ ಅವರು ನೀವು 300 ರೂ.ಗಳನ್ನೂ



Scanned with OKEN Scanner



ಮಾಜಿ ಸಚಿವೆ ಶ್ರೀಮತಿ ಬಿ.ಟಿ ಲಲಿತಾನಾಯಕ್

ಸಹ ಬಹಳ ಹಿಂಜರಿದು ಕೊಂಡು ಆಗ್ರಹಿಸುತ್ತಿದ್ದೀರಿ. ಆದರೆ ನೀವು ರೂ. 600/–ಗಳನ್ನು ಕೇಳಲೂ ಸಹ ಅರ್ಹರು. ನಿಮ್ಮ ವೇತನವು ಹೆಚ್ಚಾಗಲೇ ಬೇಕು. ಎಂದು ಕಾರ್ಮಿಕರ ಧ್ವನಿಗೆ ತಮ್ಮ ಧ್ವನಿ ಗೂಡಿಸಿದರು.

ಹಿರಿಯ ಪತ್ರಕರ್ತರೂ, ಸಂಘಟನೆಗಳ ಬೆಂಬಲಿಗರೂ ಆದ ಡಾ. ವಿಜಯಾ 'ನಾವು ಮಹಿಳೆಯರು ಇಂದಿಗೂ ಕೂಡ ನಮ್ಮ ಮೂಲಭೂತ ಸೌಕರ್ಯಗಳಿಗೇ ಹೊಡೆದಾಡುವ ಪರಿಸ್ಥಿತಿಯನ್ನು ವ್ಯವಸ್ಥೆ ಸೃಷ್ಟಿ ಮಾಡಿದೆ. ಅದನ್ನು ಬಿಟ್ಟು ಮತ್ತಷ್ಟು ಉನ್ನತ ದರ್ಜೆಯ ಜೀವನಕ್ಕಾಗಿ ಹೊಡೆದಾಡಲು ನಮಗೆ ಸಾಧ್ಯವೇ ಇಲ್ಲದಂತಾಗಿದೆ.' ಎಂದು ವಿಷಾದಿಸಿದರು. ನಂತರ ಗಾರ್ಮೆಂಟ್ಸ್ ಮಹಿಳೆಯರಿಗಾಗಿ ನಾವು (ಗಮನಾ) ಆಂದೋಲನದ ಕರಪತ್ರ ಹಾಗೂ ಪೋಸ್ಟರ್‌ಗಳನ್ನು ಬಿಡುಗಡೆ ಮಾಡುವ ಮೂಲಕ, ಆಂದೋಲನಕ್ಕೆ ಚಾಲನೆ ನೀಡಿದರು. ಈ ಪೋಸ್ಟರ್‌ಗಳನ್ನು 'ಮರಾ ಸಂಸ್ಥೆ'ಯ ಗೆಳೆಯರು ಸುಂದರವಾಗಿ ಬರೆದುಕೊಟ್ಟಿದ್ದರು.



GATWU ಅಧ್ಯಕ್ಷರಾದ ಅಶೀಮ್‌ರಾಯ್



ಹಿರಿಯ ಪತ್ರಕರ್ತೆ ಡಾ. ವಿಜಯಾ ಹಾಗೂ ಕಲಾವಿದೆ ರೇಖಾರಾವ್

ಮಾಜಿ ಸಚಿವರಾದ ಬಿ.ಟಿ. ಲಲಿತಾ ನಾಯಕ್, GATWU ವಿನ ಅಧ್ಯಕ್ಷರಾದ ಅಶೀಮ್‌ರಾಯ್ ಅವರು ಕಾರ್ಮಿರನ್ನುದ್ದೇಶಿಸಿ ಮಾತನಾಡಿದರು.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಪ್ರಧಾನ ಕಾರ್ಯದರ್ಶಿ ರತ್ನಮ್ಮ ಅವರು ಎಲ್ಲರನ್ನೂ ಸ್ವಾಗತಿಸಿದರು. GATWU ವಿನ ಸಲಹೆಗಾರರಾದ ಕೆ.ಆರ್ ಜಯರಾಮ್ ಅವರು ವಂದನಾರ್ಪಣೆ ನಡೆಸಿಕೊಟ್ಟರು.

ಕಾರ್ಯಕ್ರಮಕ್ಕೆ ಬ್ಯಾನರ್, ಕರಪತ್ರ, ಮಾಧ್ಯಮ ಪ್ರಚಾರ, ಕಾರ್ಮಿಕರ ಸಾರಿಗೆ ಖರ್ಚು, ಶ್ಯಾಮಿಯಾನ, ಕುರ್ಚಿ, ಮೈಕ್, ನೀರು, ಸ್ಟೇಷನರಿ ಇನ್ನು ಮುಂತಾದ ವ್ಯವಸ್ಥೆಗಳಿಗೆ ಒಟ್ಟು ಅಂದಾಜು 50,000/– ರೂ. ಖರ್ಚಾಗಿದೆ.



ಹಿರಿಯ ಕಾರ್ಮಿಕ ಮುಖಂಡರಾದ ಮೈಕೆಲ್ ಫರ್ನಾಂಡಿಸ್


ಈ ಕಾರ್ಯಕ್ರಮಕ್ಕಾಗಿ ಹಲವಾರು ಯೂನಿಯನ್‌ಗಳು ಮತ್ತು ವ್ಯಕ್ತಿಗಳು ಧನ ಸಹಾಯ ಮಾಡುವ ಮೂಲಕ ತಮ್ಮ ಬೆಂಬಲವನ್ನು ತೋರಿಸಿದ್ದಾರೆ. ಕೆ.ಪಿ.ಸಿ ಎಂಪ್ಲಾಯೀಸ್ ಯೂನಿಯನ್, ಬಮೂಲ್ ಎಂಪ್ಲಾಯೀಸ್ ಯೂನಿಯನ್, ತ್ರಿವೇಣಿ ಕಾರ್ಮಿಕರ ಸಂಘ, ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ ಯೂನಿಯನ್, ಕೆ.ಎಂ.ಎಫ್. ಎಂಪ್ಲಾಯಿಸ್ ಯೂನಿಯನ್, ಆಲ್ ಇಂಡಿಯಾ ಎಂ.ಎಸ್.ಐ.ಎಲ್. ಎಂಪ್ಲಾಯಿಸ್ ಯೂನಿಯನ್, ಸ್ಟೀರ್ ಇಂಜಿನಿಯರಿಂಗ್ ಎಂಪ್ಲಾಯಿಸ್ ಯೂನಿಯನ್, ವಿಷ್ಣು ಪೋರ್ಜ್ ಇಂಡಸ್ಟ್ರೀಸ್ ವರ್ಕರ್ಸ್ ಯೂನಿಯನ್, ಎಚ್.ಎಂ.ಕೆ.ಪಿ. ಈ ಯೂನಿಯನ್‌ಗಳು ಒಟ್ಟು 24,000 ರೂ. ಧನ ಸಹಾಯ ಮಾಡಿದ್ದಾರೆ. ಅವರಿಗೆ ಹಾಗೂ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಪರವಾಗಿ ಕೃತಜ್ಞತಾಪೂರ್ವಕವಾದ ಧನ್ಯವಾದಗಳು. ❐



GATWU ಹಾಗೂ ಗಾ.ಮ.ಕಾ.ಮುನ್ನಡೆಯ ಪ್ರಧಾನ ಕಾರ್ಯದರ್ಶಿಗಳಿಂದ ಘೋಷಣೆ



ರ್ಯಾಲಿಯಲ್ಲಿ ಸಾಗುತ್ತಿರುವ ಕಾರ್ಮಿಕರು






Scanned with OKEN Scanner

# ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ 'ಕನ್ನಡ ಕಲಿಕಾ ಶಿಬಿರ'



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನಡೆದ ಕನ್ನಡ ಕಲಿಕಾ ಶಿಬಿರದಲ್ಲಿ ಗಾ.ಮ.ಕಾ. ಮುನ್ನಡೆಯ ಸದಸ್ಯರು ಭಾಗವಹಿಸಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ 'ಕಾರ್ಮಿಕರಿಗಾಗಿ ಕನ್ನಡ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. 2012ರ ಜನವರಿಯಿಂದ ಮಾರ್ಚ್ 31 ರ ಅವಧಿಯಲ್ಲಿ ನಾಯಂಡ ಹಳ್ಳೀಯ ತಿಗಳರ ಪಾಳ್ಯ ಹಾಗೂ ಬಾಪೂಜಿ ನಗರದಲ್ಲಿ ಈ ಕಲಿಕಾ ಶಿಬಿರಗಳನ್ನು ನಡೆಸಲಾಯಿತು. 3 ತಿಂಗಳ ಕಾಲ ನಡೆದ ಈ ಕಲಿಕಾ ಶಿಬಿರದಲ್ಲಿ ಒಟ್ಟು 60ಕ್ಕೂ ಹೆಚ್ಚು ಮಂದಿ ಕನ್ನಡ ಕಲಿತಿದ್ದಾರೆ.



ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಹೆಚ್ಚಾಗಿ ಓದು ಬರಹ ಬಾರದವರು, ಸಣ್ಣ ವಯಸ್ಸಿಗೇ ಶಾಲೆ ಬಿಟ್ಟವರು, ಶಾಲೆಯ ಮುಖವನ್ನೇ ನೋಡದೆ, ಸಹಿ ಹಾಕಲು ಮಾತ್ರ ಕಲಿತವರು, ಬೇರೆ ಭಾಷೆ ಬಂದರೂ ಕನ್ನಡ ಬಾರದವರು ಹೀಗೆ ಎಲ್ಲರೂ ಈ ಶಿಬಿರದಲ್ಲಿ ಭಾಗವಹಿಸಿದ್ದರು. ನಾಯಂಡಹಳ್ಳಿಯ ಬಿ.ಬಿ.ಎಂ.ಪಿ ಸದಸ್ಯೆ, ಶ್ರೀಮತಿ ರಾಜೇಶ್ವರಿ ಚೆಳಗೋಡ್ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಡಾ.ರಂಗಾರೆಡ್ಡಿ ಕೋಡಿರಾಂ ಪುರ ಹಾಗೂ ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ಮುರಳೀಧರ ಬೆಂಬಲದೊಂದಿಗೆ ಪ್ರಾರಂಭವಾದ ಈ ಶಿಬಿರ ಮೂರು ತಿಂಗಳ ಕಾಲ ಯಾವುದೇ ಅಡಚಣೆಯಿಲ್ಲದೆ ನಡೆದು, ಪೂರ್ಣಗೊಂಡಿದೆ. ಇದನ್ನು ಗಾರ್ಮೆಂಟ್ಸ್ ಕಾರ್ಮಿಕರಿಗೆ ತಲುಪಿಸಲು ಕಾರಣರಾದ ಪ್ರಾಧಿಕಾರದ ಸಂಚಾಲಕರಾದ ಬಿ.ಸುರೇಶ ಅವರಿಗೂ ಹಾಗೂ ಹಣ ಸಹಾಯ ಮಾಡಿದ ಪ್ರಾಧಿಕಾರಕ್ಕೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಈ ಮೂಲಕ ಧನ್ಯವಾದಗಳನ್ನು ಸಲ್ಲಿಸುತ್ತಿದೆ. ❒

# ದಿನಾಂಕ 28-2-2012ರ ಸಾರ್ವತ್ರಿಕ ಮುಷ್ಕರಕ್ಕೆ ಗಾರ್ಮೆಂಟ್ಸ್ ಕಾರ್ಮಿಕರಿಂದ ಅಭೂತ ಪೂರ್ವ ಬೆಂಬಲ




ದಿನಾಂಕ 28.02.2012 ರಂದು ದೇಶಾದ್ಯಂತ ಕೇಂದ್ರೀಯ ಸಂಘಟನೆಗಳು ಕರೆದಿದ್ದ ಸಾರ್ವತ್ರಿಕ ಮುಷ್ಕರಕ್ಕೆ ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರು ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದ್ದಾರೆ. GATWUವಿನ ನೇತೃತ್ವದಲ್ಲಿ ಮೈಸೂರು ರಸ್ತೆಯ ಹೊಸಗುಡ್ಡದ ಹಳ್ಳಿಯಲ್ಲಿ ಸುಮಾರು 600 ಕಾರ್ಮಿಕರು ರ್‍ಯಾಲಿ ನಡೆಸಿ, ಕನಿಷ್ಠವೇತನದ ಹೆಚ್ಚಳವೂ ಸೇರಿದಂತೆ, ಶೋಷಣೆರಹಿತ ಕೆಲಸದ ವಾತಾವರಣ ಹಾಗೂ ತಮ್ಮ ಇತರ ಹಕ್ಕುಗಳಿಗಾಗಿ ಆಗ್ರಹಿಸಿದರು. ಕಾರ್ಮಿಕ ಮುಖಂಡರಾದ ಶ್ರೀ ಜಯರಾಮ್ ಕೆ.ಆರ್, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಪ್ರಧಾನ ಕಾರ್ಯದರ್ಶಿ ರತ್ನಮ್ಮ ಹಾಗೂ ಖಜಾಂಚಿ ಮದೀನಾತಾಜ್‌ರವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು.

ಬೆಂಗಳೂರಿನ ಬಹುತೇಕ ಗಾರ್ಮೆಂಟ್ಸ್ ಕಾರ್ಖಾನೆಗಳು ಮುಷ್ಕರಕ್ಕೆ ಬೆಂಬಲ ಸೂಚಿಸಿ ಕಾರ್ಖಾನೆಗಳನ್ನು ಮುಚ್ಚಿದ್ದರು. 2009 ಆಗಸ್ಟ್ ಹಾಗೂ 2010 ಸೆಪ್ಟೆಂಬರ್‌ನಲ್ಲಿ ನಡೆದ ಇದೇ ರೀತಿಯ ಸಾರ್ವತ್ರಿಕ ಮುಷ್ಕರಕ್ಕೆ ಯಾವ ಗಾರ್ಮೆಂಟ್ಸ್ ಕಾರ್ಖಾನೆಯ ಮಾಲೀಕರೂ ಸ್ಪಂದಿಸದೆ, ಒತ್ತಡ ಹಾಕಿ ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದರು. ಆದರೆ ಆಗಲೂ GATWU ಪ್ರತಿಯೊಂದು ಕಾರ್ಖಾನೆಗೂ ಹೋಗಿ ಕಾರ್ಮಿಕರನ್ನು ಮನವೊಲಿಸಿ, ಹೊರಗೆ ಕರೆದು ಮುಷ್ಕರದಲ್ಲಿ ಭಾಗಿಯಾಗುವಂತೆ ಮಾಡಿ ಬೃಹತ್ ರ್‍ಯಾಲಿಯೊಂದನ್ನು ಸಂಘಟಿಸಿತ್ತು.

ಈ ಹಿನ್ನೆಲೆಯಲ್ಲಿ 2012ರ ಈ ಸಾರ್ವತ್ರಿಕ ಮುಷ್ಕರಕ್ಕೆ GATWU ವಿನ ನೇತೃತ್ವದಲ್ಲಿ ಎಲ್ಲ ಕಾರ್ಖಾನೆಯ ಕಾರ್ಮಿಕರೂ ಮುಂಚೆಯೇ ಆಡಳಿತವರ್ಗದವರೊಂದಿಗೆ ಮುಷ್ಕರಕ್ಕೆ ಬೆಂಬಲ ಸೂಚಿಸಲೇಬೇಕೆಂದು ಒತ್ತಡ ಹಾಕಿದ ಕಾರಣ, ಮೈಸೂರು ರಸ್ತೆಯ ಮೈಸೂರು ಸರ್ಕಲ್‌ನಿಂದ ಹಿಡಿದು ಬಿಡದಿಯವರೆಗಿರುವ ಸುಮಾರು 20 ಪ್ರಮುಖ ಗಾರ್ಮೆಂಟ್ಸ್ ಕಂಪನಿಗಳ ಘಟಕಗಳು ಬಂದ್ ಆಗಿದ್ದವು. ತುಮಕೂರು ರಸ್ತೆ, ಹಾಗೂ ಹೊಸೂರು ರಸ್ತೆಗಳಲ್ಲಿಯೂ ಬಹುತೇಕ ಕಂಪನಿಗಳು ಬಂದ್‌ನಲ್ಲಿ ಭಾಗವಹಿಸಿದ್ದವು. ❒





Scanned with OKEN Scanner

# ಸಂಘಟನೆಯಲಿ ಶಕ್ತಿಯಿದೆ....

## ಕಾರ್ಮಿಕರ ಸ್ಪಂದನ

*ಸ್ನೇಹಿತರೇ,*

ನಾನು ಕೃಷ್ಣಪ್ಪ, ಕಬ್ಬನ್‌ಪೇಟೆಯ ಮಗ್ಗವೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಮೈಸೂರು ರಸ್ತೆಯ ನಾಯಂಡಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ನನಗೆ ಇಬ್ಬರು ಮಕ್ಕಳು. ನನ್ನ ಹೆಂಡತಿ ಗೌರಮ್ಮ, ನಾಯಂಡಹಳ್ಳಿಯಲ್ಲಿರುವ ದೇವಕಿ ಡಿಸೈನ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಕಾರ್ಖಾನೆಯಲ್ಲಿ ದಿನಾಂಕ 15.12.2012 ರಂದು ಅವರು ಮನಸ್ಸಿಗೆ ಬಹಳ ಬೇಸರ ಮಾಡಿಕೊಂಡು ಕೆಲಸದಿಂದ ಬಂದು ನನಗೆ ಕೆಲಸ ಮಾಡಲು ಬಹಳ ಕಷ್ಟವಾಗುತ್ತಿದೆ ಎಂದು ಬಹಳ ಅತ್ತರು. ಅವರಿಗೆ ಬಹಳ ದಿನದಿಂದ ಕಾರ್ಖಾನೆಯಲ್ಲಿ ಅವರ ಸಹೋದ್ಯೋಗಿಗಳು ಹಾಗೂ ಮೇಲ್ವಿಚಾರಕರು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ, ಈ ಬಗ್ಗೆ ಆಡಳಿತ ವರ್ಗದವರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ತಿಳಿದುಬಂದಿತು. ನಾನು ಕಾರ್ಖಾನೆಯ ಬಳಿಗೆ ಹೋಗಿ ಆಡಳಿತವರ್ಗದವರ ಜೊತೆ ಮಾತನಾಡಲು ಯತ್ನಿಸಿ, ನನ್ನ ಹೆಂಡತಿಗೆ ಬರಬೇಕಾದ ಬಾಕಿ ಹಣವನ್ನು (ಬೋನಸ್, ಓ.ಟಿ, ವೇತನ) ಕೊಡುವಂತೆ ಕೇಳಿದಾಗ ಅವರು ನನಗೆ ಯಾವ ರೀತಿಯಲ್ಲಿಯೂ ಸ್ಪಂದಿಸಲಿಲ್ಲ. ನನ್ನ ಗೆಳೆಯರೊಬ್ಬರು ನನಗೆ GATWU ಕಾರ್ಯಕರ್ತರ ದೂರವಾಣಿ ಸಂಖ್ಯೆಯನ್ನು ಕೊಟ್ಟರು. ತಕ್ಷಣವೇ ನಾನು ಅವರನ್ನು ಸಂಪರ್ಕಿಸಿ ನನ್ನ ಹೆಂಡತಿಯ ಸಮಸ್ಯೆಯನ್ನು ತಿಳಿಸಿದೆ.

ತಕ್ಷಣವೇ ಅವರು ನಮ್ಮ ಮನೆಗೆ ಬಂದು ನನ್ನ ಹೆಂಡತಿ, ಮಕ್ಕಳೊಂದಿಗೆ ಮಾತನಾಡಿ, ಸಾಂತ್ವನ ಹೇಳಿ, ಕಾರ್ಖಾನೆಯ ಆಡಳಿತವರ್ಗದವರನ್ನು ಸಂಪರ್ಕಿಸಿದರು. ಅವರೊಂದಿಗೆ ನಮ್ಮ ಪರವಾಗಿ ಮಾತನಾಡಿ, ನನ್ನ ಹೆಂಡತಿಗೆ ಬರಬೇಕಾಗಿದ್ದ ಬಾಕಿ ಹಣವನ್ನೂ ಸೇರಿ ರೂ. 30,000 ವನ್ನು ಪರಿಹಾರವನ್ನಾಗಿ ಕೊಡಿಸಿದರು.

GATWU ವಿನಂತಹ ಸಂಘದ ಸಹಾಯ ಇಲ್ಲದಿದ್ದರೆ ಆಡಳಿತವರ್ಗದವರು ನಮ್ಮಂತಹ ಬಡ ಕಾರ್ಮಿಕರ ಕಡೆ ತಿರುಗಿಯೂ ನೋಡುತ್ತಿರಲಿಲ್ಲ, ಮತ್ತು ಯಾವ ಪರಿಹಾರವನ್ನೂ ನೀಡುತ್ತಿರಲಿಲ್ಲ. GATWUವಿನ ಮಧ್ಯಸ್ತಿಕೆಯಿಂದ ನಮಗೆ ಹಣ ದೊರೆತಿದೆ. ನಾವು GATWU ವಿನ ಸದಸ್ಯರಾಗಿದ್ದೇವೆ. ನಾನು ಮತ್ತು ನನ್ನ ಹೆಂಡತಿ ಗೌರಮ್ಮ, GATWU ವಿಗೆ ಈ ಮೂಲಕ ಕೃತಜ್ಞತೆಗಳನ್ನು ತಿಳಿಸುತ್ತೇವೆ.

# ಆಡಳಿತ ವರ್ಗದೊಂದಿಗೆ ಕಾರ್ಮಿಕರ ಪರ GATWU ಯಶಸ್ವೀ ಸಂಧಾನ

ಟೆಕ್ಸ್‌ಪೋರ್ಟ್ ಕ್ರಿಯೇಶನ್ಸ್ ಕಾರ್ಖಾನೆಯ ಕ್ರಶ್‌ನಲ್ಲಿ ಕಾರ್ಮಿಕರೊಬ್ಬರ 11 ತಿಂಗಳ ಮಗುವೊಂದು ತೀರಿಕೊಂಡಿತು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಗಾಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಸಂಘಟನೆಗಳು ಮಗುವಿನ ಸಂಸ್ಕಾರವಾಗುವವರೆಗೂ ಜೊತೆಯಲ್ಲಿದ್ದುದು ಮಾತ್ರವಲ್ಲದೆ ಮಗುವಿನ ಸಾವಿಗೆ ಕಾರಣ ಏನಾಗಿರಬಹುದು ಎಂದು ತಿಳಿಯಲು ಶವಪರೀಕ್ಷೆ ಮಾಡಿಸಬೇಕೆಂದು ಮಗುವಿನ ತಂದೆ ತಾಯಿಯರನ್ನು ಒತ್ತಾಯಿಸಿದವು. ಆದರೆ 11 ತಿಂಗಳ ಮಗುವಿನ ಶವಪರೀಕ್ಷೆ ಮಾಡಿಸಲು ಖಡಾಖಂಡಿತವಾಗಿ ನಿರಾಕರಿಸಿದ ತಂದೆತಾಯಿಗಳು ಇದಕ್ಕೆ ಒತ್ತಾಯಿಸಿದ ಸಂಘಟನೆಯ ಕಾರ್ಯಕರ್ತರ ಬಗ್ಗೆ ಬೇಸರ ವ್ಯಕ್ತಪಡಿಸಿದ್ದರು. ಜೊತೆಗೆ ಅಲ್ಲಿದ್ದ ಅಕ್ಕಪಕ್ಕದ ಸಾರ್ವಜನಿಕರು ಮಗುವಿನ ಶವಪರೀಕ್ಷೆಯನ್ನು ಮಾಡಿಸುವುದು ಅವಶ್ಯಕತೆಯಿಲ್ಲ ಎಂದು ಹೇಳಿದ್ದರಿಂದ ಗಾ.ಮ.ಕಾ ಮುನ್ನಡೆ ಹಾಗೂ GATWU ಸಂಘಟನೆಗಳ ಕಾರ್ಯಕರ್ತರು ಸುಮ್ಮನಾಗಬೇಕಾಯಿತು.

GATWU ಮುಂದುವರೆದು ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್ ಆಡಳಿತವರ್ಗದೊಂದಿಗೆ ಮಾತುಕತೆ ನಡೆಸಿ ಕಾರ್ಖಾನೆಯ ಕ್ರಶ್‌ನಲ್ಲಿ ಮಗು ಮೃತಪಟ್ಟಿದ್ದರಿಂದ ಮಗುವಿನ ತಂದೆ ತಾಯಿಯರಿಗೆ ರೂ. 1,15,000 ರೂ.ಗಳನ್ನು ಪರಿಹಾರವನ್ನಾಗಿ ಕೊಡಿಸಿತು. ಮಗುವಿನ ತಾಯಿಯು, ಮಗುವು ಮೃತ ಪಟ್ಟ ಕೇವಲ ಒಂದು ದಿನದ ಹಿಂದೆ ತಾನೇ ಕೆಲಸಕ್ಕೆ ಸೇರಿದ್ದರೂ ಸಹ, ಅವರಿಗೆ ಎರಡು ತಿಂಗಳ ರಜೆಯನ್ನು ಕೊಡುವಂತೆ ಆಡಳಿತವರ್ಗಕ್ಕೆ ತಿಳಿಸಿ, ಆ ಅವಧಿಯ ಪೂರ್ತಿ ವೇತನವು ಅವರಿಗೆ ದೊರಕಿತು. ಈಗ ಮಗುವಿನ ತಾಯಿಯು ಎಂದಿನಂತೆ ಕೆಲಸ ಮಾಡುತ್ತಿದ್ದಾರೆ.

# "ಕರ್ನಾಟಕದಲ್ಲಿ ಮಹಿಳಾ ಚಳವಳಿಗಳು"

## ಬಿಜಾಪುರ ಮಹಿಳಾ ವಿಶ್ವವಿದ್ಯಾಲಯದ ರಾಜ್ಯಮಟ್ಟದ ಸಮ್ಮೇಳನ

ಬಿಜಾಪುರ ಮಹಿಳಾ ವಿಶ್ವವಿದ್ಯಾಲಯವು, ಮಹಿಳಾ ದಿನಾಚರಣೆಯ ಅಂಗವಾಗಿ "ಕರ್ನಾಟಕದಲ್ಲಿ ಮಹಿಳಾ ಚಳವಳಿಗಳು" ಎಂಬ ವಿಷಯದ ಬಗ್ಗೆ ರಾಜ್ಯ ಮಟ್ಟದ ಸಮ್ಮೇಳನವನ್ನು ಹಮ್ಮಿಕೊಂಡಿತ್ತು. ಕಾರ್ಯಾಗಾರದಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಭಾಗವಹಿಸಿದ್ದವು. ಗಾರ್ಮೆಂಟ್ಸ್ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹಾಗೂ ತಮ್ಮ ಮೇಲಾಗುವ ದೌರ್ಜನ್ಯವನ್ನು ಪ್ರತಿಭಟಿಸಲು ಸಂಘಟನೆ ಕಟ್ಟಿದ, ಹೋರಾಟ ನಡೆಸಿದುದರ ಬಗ್ಗೆ ಸಮ್ಮೇಳನದಲ್ಲಿ ಹಂಚಿಕೊಂಡವು.

ಸಮ್ಮೇಳನದಲ್ಲಿ ಮಹಿಳಾ ಚಳವಳಿಯು ಎದುರಿಸುತ್ತಿರುವ ಅನೇಕ ಸಮಕಾಲೀನ ಸಮಸ್ಯೆಗಳತ್ತ ವಿಷಯ ತಜ್ಞರು, ಮಹಿಳಾ ಹೋರಾಟಗಾರರು, ಸಂಘಟನೆಗಳ ಪ್ರತಿನಿಧಿಗಳು ಚರ್ಚಿಸಿದರು. ಗಾರ್ಮೆಂಟ್ಸ್ ಕಾರ್ಮಿಕರು, ಲೈಂಗಿಕ ಅಲ್ಪ ಸಂಖ್ಯಾತರು, ಕೃಷಿ ಕಾರ್ಮಿಕರು, ದೇವದಾಸಿ ಮಹಿಳೆಯರು ಹೀಗೇ ಹಲವಾರು ಸಮುದಾಯಗಳ ಹೋರಾಟಗಳ ಬಗ್ಗೆ ಆಯಾ ಸಮುದಾಯದ ಪ್ರತಿನಿಧಿಗಳು ಮಾತನಾಡಿದರು.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಹೋರಾಟವು ಕರ್ನಾಟಕದ ಮಹಿಳಾ ಚಳವಳಿಯ ಇತಿಹಾಸದ ಪುಟದಲ್ಲಿ ದಾಖಲಾಗಿದ್ದು ಈ ಮಹಿಳೆಯರ ಹೋರಾಟಕ್ಕೆ ಸಿಕ್ಕ ಒಂದು ಕೊಡುಗೆಯಾಗಿದೆ. ಈ ಅವಕಾಶ ಮಾಡಿಕೊಟ್ಟ ಬಿಜಾಪುರ ಮಹಿಳಾ ವಿಶ್ವವಿದ್ಯಾಲಯಕ್ಕೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದೆ.



Scanned with OKEN Scanner

## ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಆಯೋಗಕ್ಕೆ ಮುತ್ತಿಗೆ ಹಾಗೂ ತಮಟೆ ಚಳವಳಿ

ಸಮಾನತಾ ಮಹಿಳಾ ವೇದಿಕೆಯ ಮುಂದಾಳತ್ವದಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯೂ ಸೇರಿದಂತೆ ಬೆಂಗಳೂರಿನ ಹಲವಾರು ಮಹಿಳಾ ಸಂಘಟನೆಗಳು ಮಹಿಳಾ ದಿನಾಚರಣೆಯ ಅಂಗವಾಗಿ, ಮಹಿಳೆಯರ ಪಾಲಿಗೆ ಇದ್ದೂ ಇಲ್ಲದಂತಾಗಿರುವ ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮ ನಡೆಸಿದ್ದರು. ಪೌರ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಗೃಹಕೃತ್ಯ ಕಾರ್ಮಿಕರು, ಹಾಗೂ ಇತರ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಹಾಗೂ ಅವುಗಳ ಪರಿಹಾರದ ನಿಟ್ಟಿನಲ್ಲಿ ನಿರ್ದಿಷ್ಟ ಹಕ್ಕೊತ್ತಾಯಗಳನ್ನು ಈ ಸಂಘಟನೆಗಳು ಮಹಿಳಾ ಆಯೋಗಕ್ಕೆ ಸಲ್ಲಿಸಿದ್ದವು.

ಇದರ ಪರಿಣಾಮವಾಗಿ ದಿನಾಂಕ 20.3.2012 ರಂದು ಆಯೋಗದ ಕಛೇರಿಯಲ್ಲಿ ಹಲವಾರು ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಆಯೋಗದ ಅಧ್ಯಕ್ಷರಾದ ಸಿ.ಜಿ ಮಂಜುಳಾ ಅವರು ಮಾತುಕತೆ ನಡೆಸಿದರು. ಪೌರಕಾರ್ಮಿಕರ ಕನಿಷ್ಠವೇತನದ ಸಮರ್ಪಕ ಜಾರಿಯೂ ಸೇರಿದಂತೆ, ಗಾರ್ಮೆಂಟ್ಸ್ ಕಾರ್ಮಿಕರ ಕೆಲಸದ ಸ್ಥಳದಲ್ಲಿ ಕಿರುಕುಳದ ತಡೆಗೆ ಸೂಕ್ತ ಕ್ರಮ, ಹಾಗೂ ಕಾರ್ಮಿಕ ಇಲಾಖೆಯಲ್ಲಿ ಗಾರ್ಮೆಂಟ್ಸ್ ಮಹಿಳೆಯರಿಗೆಂದೇ ಏಕಗವಾಕ್ಷಿ (Single Window) ವ್ಯವಸ್ಥೆಯನ್ನು ತರಬೇಕೆಂದು ಹಲವಾರು ಬೇಡಿಕೆಗಳನ್ನು ಅಧ್ಯಕ್ಷರ ಮುಂದಿಡಲಾಯಿತು. ಇವುಗಳನ್ನು ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಆಯೋಗದ ಪರವಾಗಿ ಶಿಫಾರಸ್ಸು ಮಾಡಬೇಕೆಂದು ಆಗ್ರಹಿಸಲಾಯಿತು. ಮುಂದಿನ ದಿನಗಳಲ್ಲಿ ಈ ಕುರಿತು ಕ್ರಮಕೈಗೊಳ್ಳುವುದಾಗಿ ಅಧ್ಯಕ್ಷರು ತಿಳಿಸಿದ್ದಾರೆ. □

## 2012 – 2013 ನೇ ಸಾಲಿನ ತುಟ್ಟಿಭತ್ಯೆ ಹೆಚ್ಚಳ

ಪ್ರತಿವರ್ಷದಂತೆ ಈ ವರ್ಷವೂ (2012–2013) ಡಿ.ಎ ಹೆಚ್ಚಾಗಿದೆ. ಪ್ರತಿಯೊಬ್ಬ ಕಾರ್ಮಿಕರಿಗೂ ಅವರ ಮೇ ತಿಂಗಳ ವೇತನದಲ್ಲಿ ರೂ. 408 ಗಳನ್ನು (ದಿನಕ್ಕೆ ರೂ. 15.69) ಸೇರಿಸಿ ಕೊಡಬೇಕು. ಕಳೆದ ವರ್ಷಗಳಲ್ಲಿ ಈ ಹೆಚ್ಚಾದ ಡಿ.ಎ.ಯನ್ನು ಎಲ್ಲಾ ಕಾರ್ಮಿಕರಿಗೂ ಕೊಡದೆ ಆಡಳಿತವರ್ಗದವರು ವಂಚಿಸಿದ್ದಾರೆ. ಕಾರ್ಮಿಕರನ್ನು ವಂಚಿಸುವ ಪರಿ ಹೇಗಿದೆಯೆಂದರೆ. ಇತರೆ ಭತ್ಯೆಗಳನ್ನು ಕಡಿತಗೊಳಿಸಿ ಅದೇ ಮೊತ್ತವನ್ನು ಡಿ.ಎ.ಗೆ ಸೇರಿಸಿ, ನೀಡುತ್ತಿದ್ದಾರೆ. ಆದರೆ ಕಾರ್ಮಿಕರ ವೇತನದಲ್ಲಿ ಯಾವುದೇ ಹೆಚ್ಚಳವಾಗುವುದಿಲ್ಲ. ಕೇವಲ ಅಂಕಿ ಸಂಖ್ಯೆಗಳು ಮಾತ್ರ ಬದಲಾಗುತ್ತವೆ.

ಈ ವರ್ಷವೂ ಅದೇ ರೀತಿ ಮಾಡಿದರೆ, ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ನಡೆಸಿ, ಅವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಡಿ.ಎಯನ್ನು ಪಡೆದುಕೊಳ್ಳಬೇಕು. ಕಳೆದ ವರ್ಷ ಕೆಲವು ಕಾರ್ಖಾನೆಗಳ ಕಾರ್ಮಿಕರು ಹೋರಾಟ ಮಾಡಿದುದರ ಫಲವಾಗಿ ಅವರಿಗೆ ಈ ಹೆಚ್ಚಳವಾದ ಡಿ.ಎಯನ್ನು ಪಡೆದುಕೊಂಡಿದ್ದಾರೆ. ಈ ಡಿ.ಎ ಹೆಚ್ಚಳವಾದ ವಿಷಯಕ್ಕೆ ಸಂಬಂಧ ಪಟ್ಟಂತೆ, ಮತ್ತು ಪ್ರತಿಯೊಬ್ಬ ಕಾರ್ಮಿಕರಿಗೂ 408 ರೂ. ಗಳನ್ನು ಕೊಡಲೇ ಬೇಕೆಂದು ಗಾಟು ಪತ್ರವನ್ನು ಬರೆಯುತ್ತದೆ. ಆದಾಗ್ಯೂ ಕಾರ್ಮಿಕರಿಗೆ ಈ ಹೆಚ್ಚಳವಾದ ಡಿ.ಎ ಸಿಗಲಿಲ್ಲವೆಂದರೆ GATWU ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯನ್ನು ಈ ಕೆಳಕಂಡ ಸಂಖ್ಯೆಯಲ್ಲಿ ಸಂಪರ್ಕಿಸಬಹುದು.

**98803 71922 / 98449 59210 / 94824 44011**

2012 ರ ಮೇ ತಿಂಗಳಿನಿಂದ ಕಾರ್ಮಿಕರಿಗೆ ದೊರೆಯಬೇಕಾದ ಕನಿಷ್ಠ ವೇತನದ ವಿವರ

| ಕ್ರ ಸಂ. | ಕೆಲಸದ ಶ್ರೇಣಿ | ಮೂಲ ವೇತನ | ತುಟ್ಟಿಭತ್ಯೆ | ಒಟ್ಟು ವೇತನ ದಿನಕ್ಕೆ ರೂ. |
|---|---|---|---|---|
| 1. | ಅತಿಕುಶಲ–ಟೈಲರ್ ಗ್ರೇಡ್ 1 | 114.10 | 65.70 | 179.80 |
| 2. | ಕುಶಲ–ಟೈಲರ್ ಗ್ರೇಡ್ 2, 3 | 113.10 | 65.70 | 178.80 |
| 3. | ಅರೆಕುಶಲ (Semi Skilled) | | | |
| | ಮೆಷರ್‌ಮೆಂಟ್ ಚೆಕರ್/ಐರನರ್ ಕಾಜಾ/ ಬಟನ್/ ಓವರ್‌ಲಾಕ್/ ಮಶೀನ್ ಆಪರೇಟರ್/ | 111.50 | 65.70 | 177.20 |
| 4. | ಕುಶಲವಲ್ಲದ (Unskilled) | | | |
| | ಪ್ಯಾಕರ್/ ಹೆಲ್ಪರ್ / ಫೀಡಿಂಗ್ ಹೆಲ್ಪರ್/ಟ್ರಿಮ್ಮರ್ ಆಫೀಸ್ ಬಾಯ್/ಲೇ ಹಾಕುವವರು/ಕಸಗುಡಿಸುವವರು/ ಇತರೇ ಯಾವುದೇ ತರಬೇತಿಯಿಲ್ಲದ ಕಾರ್ಮಿಕರು | 106.80 | 65.70 | 172.50 |

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ. 376/ಹೆಚ್ ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039.
ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ

### ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು – 560 026.
   ದೂ: 26745242
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿ ಭವನ, ಕೆ.ಜಿ.ರಸ್ತೆ,
   ಬೆಂಗಳೂರು–560009
   ದೂ.: 22216485
3. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು–560 038
   ದೂ.: 25492781
4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು–27

### ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ನಾಯಂಡಹಳ್ಳಿ ಮುನ್ನಡೆ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.
ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ

ಸಂಪಾದಕ ಮಂಡಳಿ–ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 376/H, ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039. । ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner